# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್‌ಸಂಖ್ಯೆ ಮತ್ತು ಹೆಸರು : ವಾರ್ಡ್ 96 ಓಕಳೀಪುರಂ

ದಿನಾಂಕ:~~05~~23–11–2022ರಂದು ವಾರ್ಡಿನ ನೋಡಲ್ ಅಧಿಕಾರಿಯವರ ವಾರ್ಡಿನ ಕುಂದು ಕೊರೆತಗಳ ಬಗ್ಗೆ ನಡೆದ ಸಭೆಯ ನಡುವಳಿಗಳು

ಹಾಜರಿದ್ದ ಅಧಿಕಾರಿಗಳು

1. ಶ್ರೀ.ಸತ್ಯಮೂರ್ತಿ.ಎಸ್.ಸಿ– ನೋಡಲ್ ಅಧಿಕಾರಿಗಳು
2. ತ್ರಿವೇಣಿ – ಸಹಾಯಕ ಅಭಿಯಂತರರು
3. ಹನುಮಂತರಾಜು – ಕಾರ್ಯದರ್ಶಿಗಳು
4. ಶ್ರೀ.ಸಾಜಿದ್ ಅಹಮದ್ – ಹಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ.ರಾಹುಲ್ ರಾಜ್ – ಕಿರಿಯ ಆರೋಗ್ಯ ಪರಿವೀಕ್ಷಕರು
6. ಶ್ರೀ.ಕಿಶೋರ್ – ಸಹಾಯಕ ಅಭಿಯಂತರರು ಬಿಡಬ್ಲ್ಯೂಎಸ್ಎಸ್ಬಿ
7. ಅರುಣ್‌ಕುಮಾರ್ – ಬೀದಿ ದೀಪ ನಿರ್ವಾಹಣೆ ಸಹಾಯಕರು
8. ಸಂಪಂತ್ – ಸ್ಥಳೀಯ ನಾಗರೀಕರು
9. ಪ್ರಭಾಕರ್– ಸ್ಥಳೀಯ ನಾಗರೀಕರು
10. ಚಂದ್ರಶೇಖರ್– ಸ್ಥಳೀಯ ನಾಗರೀಕರು
11. ಚಿತ್ರಾ – ಸ್ಥಳೀಯ ನಾಗರೀಕರು
12. ಪವಿತ್ರಾ– ಸ್ಥಳೀಯ ನಾಗರೀಕರು

ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಸ್ಥಳೀಯ ನಾಗರೀಕರು & ಅಧಿಕಾರಿ ರವರಿಗೆ ಸ್ವಾಗತ ಕೋರತ್ತಾ ಮದ್ಯಾಹ್ನ 12.00 ಘಂಟೆಗೆ ಸಭೆಯನ್ನು ಪ್ರಾರಂಬಿಸಲಾಯಿತು. ದಿನಾಂಕ:23–11–2022ರಂದು ಬುಧುವಾರ ವಾರ್ಡ್ ಕಮಿಟಿ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸಿ, ನಿಯಾಮನುಸಾರ ಪರಿಶೀಲಿಸಿ, ಅದ್ಯತೆ ಮೇರೆಗೆ ಕ್ರಮ ವಹಿಸಲು ಹಾಗು ಕ್ರಮವಹಿಸಿದ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿ ರವರು ಉತ್ತರ ನೀಡುವಂತೆ ಸೂಚಿಸಲಾಯಿತು.

Scanned with OKEN Scanner

ಶ್ರೀ.ಸುಶೀಲಾ & ವತ್ಸಲ

1ನೇ ಮುಖ್ಯರಸ್ತೆ, ಓಕಳೀಪುರಂ 2 ದೊಡ್ಡ ಮರಗಳಲ್ಲಿ ಕಂಬಳಿಹುಳುಗಳು ಇರುವ ಬಗ್ಗೆ

ಕ್ರಮ : ಸಂಬಂಧಪಟ್ಟ ಆರಣ್ಯ ಇಲಾಖೆಯವರಿಗೆ ಸಭೆಯಲ್ಲಿ ಪೋನ್ ಮೂಲಕ ಮಾಹಿತಿ ನೀಡಿ ತಕ್ಷಣವೇ ಸ್ಪಂದಿಸಿ ಮರಗಳ ರಂಬೆಗಳನ್ನು ಕತ್ತರಿಸಿ, ಕಂಬಳಿಹುಳುಗಳನ್ನು ತೆರವುಗೊಳಿಸುತ್ತೇವೆ ಎಂದು ತಿಳಿಸಿರುತ್ತಾರೆ.

ಶ್ರೀಸಂಪಂತ್

5ನೇ ಮ್ಯೆನ್ ರೋಡ್ ಓಕಳೀಪುರಂ ರೋಡ್ ಆಗಲ 4 ಅಡಿ ಜಾಗದಲ್ಲಿ 9 ಇಂಚು ಹೊಸ ಲೈನ್ ಸ್ಯಾನಿಟರಿ ಪ್ಯೆಪ್ ಹಾಕಲು ಮಣ್ಣು ಆಗೆದು ಹಾಗೆ ಬಿಟ್ಟಿರುತ್ತಾರೆ. ಸಾರ್ವಜನಿಕರಿಗೆ ಓಡಾಡಲು ತೊಂದರೆ ಆಗುವುದರಿಂದ ಆ ಮಣ್ಣನ್ನು ತೆಗೆಯಬೇಕೆಂದು ತಿಳಿಸಿರುತ್ತಾರೆ. ಹಾಗೂ 5ನೇ ಮ್ಯೆನ್ ಎಂ.ಎಸ್. ಬಿಲ್ಡಿಂಗ್ ಬಳಿ ಬೀದಿ ದೀಪ ಸರಿಯಾಗಿ ಉರಿಯುತ್ತಿಲ್ಲ ಎಂದು ತಿಳಿಸಿರುತ್ತಾರೆ.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ನಂ.96 ಓಕಳೀಪುರಂ ಹಾಗೂ ಸಭೆಯಲ್ಲೆ ಬೀದಿ ದೀಪಗಳ ನಿರ್ವಹಿಸುವ ಸಹಾಯಕರಿಗೆ ತಕ್ಷಣವೇ ದೀಪಗಳನ್ನು ಸರಿಪಡಿಸಲು ತಿಳಿಸಿದೆ.

ಶ್ರೀಸಂಪಂತ್

ಓಕಳೀಪುರಂ 1ನೇ ಕ್ರಾಸ್ ರಾಮಚಂದ್ರಪುರದಲ್ಲಿ ವಿದ್ಯುತ್ ಕಂಬ ವಾಲಿರುವ ಬಗ್ಗೆ, 1 & 2 ನೇ ಕ್ರಾಸ್‌ನಲ್ಲಿ ಜಲ್ಲಿಯನ್ನು ಹಾಕಿ ಇನ್ನೂ ಸಹ ಡಾಂಬರೀಕರಣ ಮಾಡದಿರುವ ಬಗ್ಗೆ.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು ಓಕಳೀಪುರಂ ಹಾಗೂ ಸಹಾಯಕ ಅಭಿಯಂತರರು ವಿದ್ಯುತ್ ಬೆಸ್ಕಾಂ ರವರಿಗೆ ಮಾಹಿತಿ ನೀಡಲಾಗಿ ಸರಿಪಡಿಸಿಕೊಡುತ್ತೇವೆ ಎಂದು ತಿಳಿಸಿರುತ್ತಾರೆ.

ಶ್ರೀಸಂಪಂತ್

ರಾಮಚಂದ್ರಪುರ 3ನೇ ಮ್ಯೆನ್ ಅಂಬರೀಷ್ ಸರ್ಕಲ್‌ನ ರಸ್ತೆಯಲ್ಲಿ ಜಲ್ಲಿಯನ್ನು ತೆಗಿಸುವ ಬಗ್ಗೆ.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ನಂ.96

ಶ್ರೀ.ಫಭ್ರಾಕರ್

ಅಯ್ಯಪ್ಪ ದೇವಸ್ಥಾನ ಓಕಳೀಪುರಂ 5ನೇ ಮ್ಯೆನ್‌ನಲ್ಲಿ ಒಂದು ಬೋರ್‌ವೆಲ್ ಕೆಟ್ಟು ಹೋಗಿರುವ ಬಗ್ಗೆ, ಹಾಗೂ ಎಂ.ಎಸ್.ಬಿಲ್ಡಿಂಗ್ ಹಿಂದೆ ಒಂದು ಬೋರ್‌ವೆಲ್ ಕೆಟ್ಟು ಹೋಗಿರುವ ಬಗ್ಗೆ, ರಾಬರ್ಟ್ ಸನ್ ರಸ್ತೆಯಲ್ಲಿ ಒಂದು ಬೋರ್ ವೆಲ್ ಕೆಟ್ಟು ಹೋಗಿರುವ ಬಗ್ಗೆ, ಒಟ್ಟು ಮೂರು ಬೋರ್‌ವೆಲ್‌ಗಳು ಕೆಟ್ಟು ಹೋಗಿರುತ್ತೇವೆ ಎಂದು ತಿಳಿಸಿರುತ್ತಾರೆ.

ಕ್ರಮ : ಸಂಬಂಧಪಟ್ಟ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ರವರು ರಿಪೇರಿ ಮಾಡಿಸಿಕೊಡುತ್ತೇವೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

Scanned with OKEN Scanner

**ಶ್ರೀ.ಪ್ರಭಾಕರ್**

ನಾಗೇಂದ್ರ ಗಾರ್ಡ್‌ನ್‌ನಲ್ಲಿ ರಸ್ತೆಗಳು ತುಂಬಾ ಚಿಕ್ಕದಿದ್ದು, ಮೋರಿಯನ್ನು ಎತ್ತರ ಮಾಡಬೇಕೆಂದು ಹಾಗೂ 4 ರಸ್ತೆಗಳು ಒಂದುಗೂಡುವುದರಿಂದ ಮೋರಿಯನ್ನು ಒಂದು ಅಡಿ ಎತ್ತರ ಮಾಡಬೇಕೆಂದು ತಿಳಿಸಿರುತ್ತಾರೆ. ಹಾಗೂ ಈ ಕೆಲಸವು ಒಂದು ತಿಂಗಳು ಅದರೂ ಸಹ ಕೆಲಸ ನಿರ್ವಹಿಸಲ್ಲ ಎಂದು ತಿಳಿಸಿರುತ್ತಾರೆ. ಹಾಗು ಓಕಳೀಪುರಂ 1ನೇ ಮೈನ್ ರೋಡಿನಲ್ಲಿ ಮೋರಿಯನ್ನು ಕ್ಲೀನ್ ಮಾಡಿಸುವ ಬಗ್ಗೆ, ತಿಳಿಸಿದ್ದು, ಈ ಕೆಲಸವು ಮುಕ್ಕಾಲು ಭಾಗ ಕೆಲಸ ಆಗಿದ್ದು, ಇನ್ನು 25 ಪರ್ಸೆಂಟ್ ಕೆಲಸವಾಗಿಲ್ಲ ಎಂದು ತಿಳಿಸಿರುತ್ತಾರೆ.

ಕ್ರಮ : ಸಂಬಂಧಪಟ್ಟ ಸಹಾಯಕ ಇಂಜಿನಿಯರ್ ರವರು ಕೆಲಸ ನಿರ್ವಹಿಸುವ ಕಂಟ್ರಾಕ್ಟರ್ ರವರಿಗೆ ವಿಷಯ ತಿಳಿಸಿ ಕೆಲಸ ತ್ವರಿತವಾಗಿ ಮಾಡಲು ತಿಳಿಸಿರುತ್ತಾರೆ.

**ಶ್ರೀ.ಚಂದ್ರಶೇಖರ್**

ಬೀದಿ ದೀಪಗಳ ನಿರ್ವಹಣೆ ಬಗ್ಗೆ, ದೂರು ಕೊಟ್ಟ ಮರುದಿನವೇ ಬಂದು ರಿಪೇರಿ ಮಾಡಿಸಿಕೊಡಬೇಕೆಂದು ತಿಳಿಸಿರುತ್ತಾರೆ. ಆದರೆ ಒಂದು ವಾರ ಕಳೆದರೂ ಸಹ ಬೀದಿ ದೀಪಗಳ ರಿಪೇರಿ ಮಾಡಲು ಬರುವುದಿಲ್ಲ ಅದ್ದರಿಂದ್ದ ದೂರು ಕೊಟ್ಟ ಮಾರನೇ ದಿನ ಅಥವಾ ಎರಡನೇ ದಿನಕ್ಕೆ ರಿಪೇರಿ ಮಾಡಿಕೊಡಲು ಬರಬೇಕೆಂದು ತಿಳಿಸಿರುತ್ತಾರೆ.

ಕ್ರಮ: ಸಭೆಯಲ್ಲೇ ಇದ್ದ ಬೀದಿ ದೀಪ ನಿರ್ವಹಣೆಯ ಸಹಾಯಕರು ದೂರು ಕೊಟ್ಟ ಮಾರನೇ ದಿನವೇ ಬರುತ್ತೇವೆ ಎಂದು ಸಭೆಗೆ ತಿಳಿಸಿರುತ್ತಾರೆ.

Sathyamurthy. S. C
ನೋಡಲ್ ಧಿಕಾರಿ
(ಸತ್ಯಮೂರ್ತಿ ಎಸ್.ಸಿ)
ವಾರ್ಡ್ ನಂ.96 ಓಕಳೀಪುರಂ.

ಕಾರ್ಯದರ್ಶಿಗಳು
ವಾರ್ಡ್ ನಂ.96 ಓಕಳೀಪುರಂ.

Scanned with OKEN Scanner

ಪ್ರತಿಯನ್ನು

1. ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ವಲಯ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ಮಾನ್ಯ ಉಪ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
6. ಆರೋಗ್ಯಾಧಿಕಾರಿ (ಪಶ್ಚಿಮ) ರವರ ಅವಗಾಹನೆಗೆ ಕಳುಹಿಸಿದೆ.
7. ಮುಖ್ಯ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಕಳುಹಿಸಿದೆ.
8. ಮಾನ್ಯ ಪೋಲೀಸ್ ಇನ್ಸ್‌ಪೆಕ್ಟರ್ (ಶ್ರೀರಾಂಪುರ) ರವರ ಸೂಕ್ತ ಕ್ರಮಕ್ಕಾಗಿ
9. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್-ಪಶ್ಚಿಮ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಗಾಂಧಿನಗರ)/ ಸಹಾಯಕ ಅಭಿಯಂತರರು (ಗಾಂಧಿನಗರ) ಘನತ್ಯಾಜ್ಯ ನಿರ್ವಹಣೆ ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಆರೋಗ್ಯ ವೈದ್ಯಾಧಿಕಾರಿ (ಗಾಂಧಿನಗರ) ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರು ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ ಸಹಾಯಕ ಅಭಿಯಂತರರು (ಗಾಂಧಿನಗರ) ರವರಿಗೆ ಸೂಕ್ತ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
13. ಉಪ ಅರಣ್ಯಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
14. ತೋಟಗಾರಿಕೆ (ಪಶ್ಚಿಮ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
15. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬಿಡ್ಲ್ಯೂ.ಎಸ್.ಎಸ್.ಬಿ ಗಾಂಧಿನಗರ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
16. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬೆಸ್ಕಾಂ (ರಾಜಾಜಿನಗರ/ ಮಲ್ಲೇಶ್ವರಂ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
17. ಕಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ನಿರ್ವಹಣೆ ಗಾಂಧಿನಗರ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
18. ಮಾರ್ಷಲ್ ವಾರ್ಡ್-96 ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
19. ಕಛೇರಿ ಕಡತಕ್ಕೆ.

Scanned with OKEN Scanner